# ಯಾನ ನವನವೀನ

ಭಿನ್ನ ಮ್ಯಾನರಿಸಂನಿಂದ ಸಿನಿಮಾರಂಗದಲ್ಲಿ ಗುರುತು ಮೂಡಿಸಿರುವ ನಟ ನವೀನ್ ಶಂಕರ್ ಇದೀಗ ನೆಗೆಟಿವ್ ಶೇಡ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಶಿವರಾಜ್‌ಕುಮಾರ್ ಅವರೊಂದಿಗೆ ನಟಿಸುತ್ತಿದ್ದು, ಅವರ ಮತ್ತೊಂದು ಸಿನಿಮಾ 'ನೋಡಿದವರು ಏನಂತಾರೆ' ಕೂಡ ಬಿಡುಗಡೆಗೆ ಸಜ್ಜಾಗಿದೆ. ಇದೇ ನೆಪದಲ್ಲಿ ಸಿನಿಮಾರಂಗದೊಂದಿಗಿನ ತಮ್ಮ ನಂಟನ್ನು 'ಸುಧಾ'ದೊಂದಿಗೆ ಹಂಚಿಕೊಂಡಿದ್ದಾರೆ.

■ ಸುಮಲತಾ ಎನ್.



◆ **ಶಿವರಾಜ್‌ಕುಮಾರ್ ಅವರೊಂದಿಗೆ ತೆರೆ ಹಂಚಿಕೊಳ್ಳುತ್ತಿರುವ ಅನುಭವ ಹೇಗಿದೆ?**

ಮುಂಚೆಯಿಂದಲೂ ಅವರೊಂದಿಗೆ ನಟಿಸಬೇಕೆನ್ನುವ ಆಸೆ ಇತ್ತು. ಯಾರಾದರೂ ನನ್ನನ್ನು 'ನಿಮಗೆ ಯಾರ ಜೊತೆ ನಟಿಸಬೇಕೆನ್ನುವ ಆಸೆಯಿದೆ' ಎಂದು ಕೇಳಿದರೆ ಮೊದಲು ಹೇಳುತ್ತಿದ್ದ ಹೆಸರೇ ಶಿವರಾಜ್‌ಕುಮಾರ್ ಅವರದ್ದು. ನನ್ನ ಫೇವರೆಟ್ ನಟ ಅವರೇ. ಇದಕ್ಕೂ ಮುಂಚೆ 2019ರಲ್ಲಿ ಅವರೊಂದಿಗೆ ನಟಿಸುವ ಅವಕಾಶ ಬಂದಿತ್ತು. ಆದರೆ ಆ ಸಿನಿಮಾ ಟೇಕ್‌ಆಫ್ ಆಗಲಿಲ್ಲ. ಈಗ ಮತ್ತೆ ಅಂಥ ಅವಕಾಶ ಸಿಕ್ಕಿದೆ.

ಶಿವರಾಜ್‌ಕುಮಾರ್ ಅವರು ಸೆಟ್‌ನಲ್ಲಿ ಒಂದು ಕಂಫರ್ಟ್ ಸೃಷ್ಟಿಸುತ್ತಾರೆ. ಅವರಿದ್ದರೆ ಒಂದು ಎನರ್ಜಿ ಇರುತ್ತದೆ. ಚಿಕ್ಕವರಾದರೂ ಪ್ರೀತಿ, ಗೌರವದಿಂದ ಮಾತನಾಡುತ್ತಾರೆ, ನಮ್ಮನ್ನು ಹುರಿದುಂಬಿಸುತ್ತಾರೆ. ಹೀಗಾಗಿ ಅವರೊಂದಿಗೆ ಕೆಲಸ ಮಾಡುತ್ತಿರುವುದು ಒಳ್ಳೆಯ ಅನುಭವವನ್ನೂ ಜೊತೆಯಾಗಿಸುತ್ತಿದೆ. ಸದ್ಯ, ನನ್ನ ಅವರ ಕಾಂಬಿನೇಷನ್‌ನ ಒಂದು ದೃಶ್ಯದ ಚಿತ್ರೀಕರಣ ನಡೆದಿದೆ.

◆ **'ಗುಲ್ಟೂ' ಸಿನಿಮಾದಿಂದ ಇಲ್ಲಿಯವರೆಗೂ ನಿಮ್ಮ ಸಿನಿಮಾ ಬದುಕಿನಲ್ಲಾದ ಪಲ್ಲಟಗಳೇನು?**

ನನಗೆ ಒಂದು 'ಗುರುತು' ಮೂಡಿದೆ. ಜನರು ನನ್ನನ್ನು ಗುರ್ತಿಸಿ ಮಾತನಾಡಿಸುತ್ತಾರೆ. ನನ್ನ ಕೆಲಸವನ್ನು ಪ್ರೋತ್ಸಾಹಿಸುವಂಥ ಜನ ಸಿಕ್ಕಿದ್ದಾರೆ. ಮುಂಚೆ ಸಂಭಾವನೆ ವಿಷಯವನ್ನು ಕೊನೆಯಲ್ಲಿ ಮಾತಾಡುತ್ತಿದ್ದರು. ಈಗ ಮೊದಲು ಸಂಭಾವನೆ ಮಾತನಾಡಿ ಆಮೇಲೆ ಸಿನಿಮಾ ಕಥೆ ಹೇಳುತ್ತಾರೆ. ಹೀಗೆ ಎಲ್ಲಾ ಆಯಾಮಗಳಲ್ಲೂ ಒಳ್ಳೆಯ ರೀತಿಯಲ್ಲಿ ಬೆಳವಣಿಗೆ ಆಗಿದೆ. ಆರು ವರ್ಷಗಳಲ್ಲಿ ಆರು ಸಿನಿಮಾಗಳಾಗಿವೆ. ಆರು ಸಿನಿಮಾಗಳಿಗೂ ಒಂದಲ್ಲ ಒಂದು ರೀತಿ ಒಳ್ಳೆಯ ಪ್ರತಿಕ್ರಿಯೆ ದೊರೆತಿದೆ. 'ಧರಣಿ ಮಂಡಲ ಮಧ್ಯದೊಳಗೆ' ಸಿನಿಮಾದಲ್ಲಿ ನನ್ನ ಪಾತ್ರಕ್ಕೆ 'ಅತ್ಯುತ್ತಮ ನಟ' ವಿಭಾಗದಲ್ಲಿ 'ಫಿಲ್ಮ್‌ಫೇರ್' ಪ್ರಶಸ್ತಿ ಬಂತು. 'ಹೊಂದಿಸಿ ಬರೆಯಿರಿ' ಒಟಿಟಿಯಲ್ಲಿ ಚೆನ್ನಾಗಿ ಓಡಿತು. ಈಚೆಗೆ ಆ ಸಿನಿಮಾದ ನನ್ನ ಪಾತ್ರಕ್ಕೆ 'ಉತ್ತಮ ಪೋಷಕ ನಟ' ವಿಭಾಗದಲ್ಲಿ 'ಸೈಮಾ ಪ್ರಶಸ್ತಿ' ಬಂದಿತು. 'ಹೊಯ್ಸಳ' ಮಾಸ್ ಇಮೇಜ್ ಕೊಟ್ಟಿತು. 'ಕ್ಷೇತ್ರಪತಿ' ಸಿನಿಮಾವನ್ನು ಇಡೀ ಉತ್ತರ ಕರ್ನಾಟಕ ಸೆಲೆಬ್ರೇಟ್ ಮಾಡಿತು. 'ಸಲಾರ್'ನಲ್ಲಿ ಚಿಕ್ಕ ಪಾತ್ರವಾದರೂ ನನ್ನನ್ನು ಗುರುತು ಇಟ್ಟುಕೊಳ್ಳುವಂತೆ ಮಾಡಿತು. ಈಗ ಶಿವರಾಜ್ ಕುಮಾರ್ ಅವರೊಂದಿಗೆ ನಟಿಸುತ್ತಿದ್ದೇನೆ. ಎಲ್ಲವೂ ಒಳ್ಳೆಯ ಬೆಳವಣಿಗೆಗಳೇ.

◆ **ಸಿನಿಮಾ ಪ್ರಾಜೆಕ್ಟ್‌ನಲ್ಲಿ ನಿಮ್ಮ ಪ್ರಾಮುಖ್ಯ ಏನಾಗಿರುತ್ತದೆ?**

ಕಥೆ. ನನ್ನ ಪಾತ್ರಕ್ಕಿಂತ ಹೆಚ್ಚಾಗಿ ಒಟ್ಟಾರೆ ಕಥೆ ಹೇಗಿದೆ ಎಂಬುದನ್ನೇ ನಾನು ನೋಡುವುದು. ಪಾತ್ರ ತುಂಬಾ ಚೆನ್ನಾಗಿದ್ದು, ಕಥೆಯಲ್ಲಿ ಸತ್ವ ಇಲ್ಲ ಎಂದರೆ ಪ್ರಯೋಜನವಿಲ್ಲ. ಹೀಗಾಗಿ ಒಟ್ಟಾರೆ ಕಥೆ ಏನು ಇಂಪ್ಯಾಕ್ಟ್